ಆ) ಬಂದಿದ್ದಲ್ಲಿ, ಡೋಣಿ ನದಿಯಲ್ಲಿ ವ್ಯರ್ಥವಾಗಿ ಹರಿದು ಹೋಗುವ ನೀರನ್ನು ಸಂಗ್ರಹಿಸಿಡಲು ಯಾವ ಯೋಜನೆಯನ್ನು ರೂಪಿಸಲಾಗಿದೆ,

ಇ) ಡೋಣಿ ನದಿಯಲ್ಲಿ ವ್ಯರ್ಥವಾಗಿ ಹರಿದು ಹೋಗುವ ನೀರನ್ನು ಸಂಗ್ರಹಿಸುವಂತೆ ಇರುವ ಪ್ರಸ್ತಾವನೆ ಏನು,

ಈ) ಯಾವ ಕಾಲ ಮಿತಿಯೊಳಗೆ ಪ್ರಸ್ತಾಪಿತ ಯೋಜನೆಗೆ ಮಂಜೂರಾತಿ ನೀಡಲಾಗುವುದು?

ಶ್ರೀ ಕೆ ಎಸ್ ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು)

ಅ) ಬಂದಿದೆ

ಆ,ಇ,ಈ) ಡೋಣಿ ನದಿಯಲ್ಲಿ ನಾಲ್ಕು ಬಾಂದಾರಗಳನ್ನು ನಿರ್ಮಿಸುವ ಯೋಜನೆಯ ಕುರಿತು ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತದಲ್ಲಿ ಸರ್ವೆ ಕಾರ್ಯ ಪ್ರಗತಿಯಲ್ಲಿರುತ್ತದೆ

1632 (2299) ಶ್ರೀ ಶಿವಾನಂದ ಎಸ್ ಪಾಟೀಲ್ (ಬಸವನಬಾಗೇವಾಡಿ) – ಮಾನ್ಯ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಬ್ಬು ಬೆಳೆಯಲಾಗಿರುವ ಕ್ಷೇತ್ರವಾರು ಸಂಖ್ಯೆ ಎಷ್ಟು,

ಆ) ವಿಜಾಪುರ ಜಿಲ್ಲೆಯಲ್ಲಿ ರೈತರು ಕಬ್ಬು ಬೆಳೆದಿರುವ ಕ್ಷೇತ್ರ ಎಷ್ಟು (ತಾಲ್ಲೂಕುವಾರು ಮಾಹಿತಿ ನೀಡುವುದು),

ಇ) ರೈತರು ಬೆಳೆದ ಕಬ್ಬನ್ನು ಕೆಲವು ಕಾರ್ಖಾನೆಗಳು ಖರೀದಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಈ) ಅಂತಹ ಕಾರ್ಖಾನೆಯ ಮೇಲೆ ಸರ್ಕಾರ ಕ್ರಮ ಕೈಗೊಳ್ಳುವಂತಹ ಅಧಿಕಾರವನ್ನು ಹೊಂದಿದೆಯೇ,

ಉ) ಹಾಗಾದರೆ ಸರ್ಕಾರ ಕಬ್ಬು ಖರೀದಿಸದೇ ಇರುವ ಕಾರ್ಖಾನೆ ಮೇಲೆ ಯಾವ ಕ್ರಮ ತೆಗೆದುಕೊಂಡಿದೆ ಮತ್ತು ಯಾವ ಕ್ರಮ ತೆಗೆದುಕೊಳ್ಳುವುದು,

ಊ) ರೈತರ ಕಬ್ಬನ್ನು ಖರೀದಿಸದೇ ಇರುವ ಕಾರ್ಖಾನೆಗಳು ಬಿಜಾಪುರ ಜಿಲ್ಲೆಯಲ್ಲಿ ಯಾವ್ಯಾವು?

ಶ್ರೀ ಎಸ್ ಎ ರವೀಂದ್ರನಾಥ್ (ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು)

ಅ) ರಾಜ್ಯದಲ್ಲಿ 3 57 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಕಬ್ಬು ಬೆಳೆ ಇರುತ್ತದೆ

ಆ) ವಿಜಾಪುರ ಜಿಲ್ಲೆಯಲ್ಲಿ ರೈತರು ಬೆಳೆದ ಕಬ್ಬಿನ ತಾಲ್ಲೂಕುವಾರು ಮಾಹಿತಿ ಕೆಳಗಿನಂತಿದೆ

1	ಬಿಜಾಪುರ	5042 ಹೆಕ್ಟರ್ಸ್
2	ಬಸವನ ಬಾಗೇವಾಡಿ	1628 ಹೆಕ್ಟರ್ಸ್
3	ಮುದ್ದೇಬಿಹಾಳ್	700 ಹೆಕ್ಟರ್ಸ್
4	ಸಿಂಧಗಿ	8507 ಹೆಕ್ಟರ್ಸ್
5	ಇಂಡಿ	11245 ಹೆಕ್ಟರ್ಸ್
	ಒಟ್ಟು	**27122** ಹೆಕ್ಟರ್ಸ್

ಇ) ಕೆಲವು ಕಾರ್ಖಾನೆಗಳು ರೈತರ ಕಬ್ಬನ್ನು ಸಕಾಲದಲ್ಲಿ ಖರೀದಿಸಿಲ್ಲವೆಂದು ರೈತ ಮುಖಂಡರು ದೂರಿರುತ್ತಾರೆ

ಈ) ಕಾರ್ಖಾನೆಯೊಂದಿಗೆ ನೊಂದಣಿ ಮಾಡಿಕೊಂಡ ರೈತರ ಕಬ್ಬನ್ನು ಖರೀದಿಸಲು ನಿರಾಕರಿಸುವ ಕಾರ್ಖಾನೆಗಳ ಕಬ್ಬು ಅರೆಯುವ ಪರವಾನಿಗೆಯನ್ನು *"The Karnataka Sugar (Regulation of Production) order 1975"* ಪ್ರಕಾರ ರದ್ದು ಪಡಿಸುವ ಅಧಿಕಾರವನ್ನು ಸರ್ಕಾರ ಹೊಂದಿದೆ

ಉ) ಕಾರ್ಖಾನೆಗಳು ಕಬ್ಬು ನುರಿಸುತ್ತಿರುವುದರಿಂದ ಯಾವುದೇ ಕ್ರಮ ತೆಗೆದುಕೊಂಡಿಲ್ಲ

ಊ) ಬಿಜಾಪುರ ಜಿಲ್ಲೆಯಲ್ಲಿ ರೈತರ ಕಬ್ಬನ್ನು ಖರೀದಿಸದೇ ಇರುವ ಕಾರ್ಖಾನೆಗಳು ಯಾವುವು ಇರುವುದಿಲ್ಲ ಲಭ್ಯವಿರುವ ಹೆಚ್ಚುವರಿ ಕಬ್ಬನ್ನು ಅಕ್ಕ ಪಕ್ಕದ ಜಿಲ್ಲೆಯ ಕಾರ್ಖಾನೆಗಳು ನುರಿಸುವಂತೆ ಈಗಾಗಲೇ ಆದೇಶ ಹೊರಡಿಸಲಾಗಿದೆ

1633 (2319) ಶ್ರೀ ಶಿವರಾಮು ಬಿ (ಗಂಡಸಿ) – ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನೇತ್ರಾವತಿ ನದಿ ತಿರುವು ಯೋಜನೆಯ ಪ್ರಸ್ತಾವನೆಯ ಬಗ್ಗೆ ಈ ಹಿಂದೆ ಸರ್ಕಾರ ಹಣ ಒದಗಿಸಿರುತ್ತದೆಯೇ,

ಆ) ಒದಗಿಸಿದ್ದಲ್ಲಿ, ಅದರ ಮೊತ್ತವೆಷ್ಟು,

ಇ) ಪ್ರಸ್ತಾವನೆ ಈಗ ಯಾವ ಹಂತದಲ್ಲಿರುತ್ತದೆ,

ಈ) ಈ ಯೋಜನೆಯಿಂದ ಕಾವೇರಿ ಕೊಳ್ಳಕ್ಕೆ ಲಭ್ಯವಾಗಿರುವ ನೀರಿನ ಮಟ್ಟ ತಾಂತ್ರಿಕವಾಗಿ ದೃಢಪಟ್ಟಿರುತ್ತದೆಯೇ,

ಉ) ಇದ್ದಲ್ಲಿ, ಅದರ ಪ್ರಮಾಣ ಎಷ್ಟು,

ಊ) ಈ ಯೋಜನೆಯನ್ನು ಅನುಷ್ಠಾನಗೊಳಿಸುವ ಆಲೋಚನೆ ಸರ್ಕಾರಕ್ಕೆ ಇದೆಯೇ?

ಶ್ರೀ ಕೆ ಎಸ್ ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು)

ಅ) ಹೌದು

ಆ) ಈ ಹಿಂದೆ ನೇತ್ರಾವತಿ ತಿರುವು ಯೋಜನೆಗಾಗಿ ಈ ಕೆಳಕಂಡಂತೆ ಅನುದಾನವನ್ನು ನಿಗದಿಪಡಿಸಲಾಗಿತ್ತು

ಅ) 2001–02 – ರೂ 100 00 ಲಕ್ಷಗಳು

ಆ) 2002–03 – ರೂ 57 74 ಲಕ್ಷಗಳು

ಇ) 2003–04 – ರೂ 1,000 ಗಳನ್ನು ಸಾಂಕೇತಿಕ ಅನುದಾನವಾಗಿ ನಿಗದಿ ಪಡಿಸಲಾಗಿತ್ತು (54 ಯೋಜನೆಗಳಿಗೆ)